ಉಪಾಧ್ಯಕ್ಷರು : ಈಗ ಮಾನ್ಯ ರಾಮಲಿಂಗರೆಡ್ಡಿಯವರು ಹಾಜರಿಲ್ಲ. ಶ್ರೀಯುತ ಹೆಚ್.ಎಂ. ರೇವಣ್ಣನವರು ಸಹ ಹಾಜರಿಲ್ಲ.

ರೈತರ ಬೆಳೆಗೆ ಅಣೇವಾರಿ ನಿರ್ದಿಷ್ಟಪಡಿಸುವ ಬಗ್ಗೆ

569. ಶ್ರೀ ಮಂಜುನಾಥ ಚನ್ನಪ್ಪ ಕುನ್ನೂರ (ಶಿಗ್ಗಾಂವ) :– ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಕಂದಾಯ ಇಲಾಖೆಯ ಅಧಿಕಾರಿಗಳು ರೈತರು ಬೆಳೆದ ಬೆಳೆಗಳ ಅಣೆವಾರಿ ನಿರ್ದಿಷ್ಟಪಡಿಸುವಾಗ ಖುದ್ದಾಗಿ ಜಮೀನುಗಳಿಗೆ ಭೇಟಿ ಕೊಡದೆಯೇ ಅಣೇವಾರಿ ತಯಾರು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಸನ್ 1988–89ರಲ್ಲಿ 100ಕ್ಕೆ 50ರ ಮೇಲ್ಪಟ್ಟು ಅಣೇವಾರಿ ನಿಗದಿಪಡಿಸಿ ರೈತರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸದರಿ ಅಣೇವಾರಿಯನ್ನು ಸರಿಪಡಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ಮಾಡಲಾಗಿದೆಯೇ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು):–

ಅ) ಇಲ್ಲಾ

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲ.

ಶ್ರೀ ಮಂಜುನಾಥ ಚನ್ನಪ್ಪ ಕುನ್ನೂರ :– ಮಾನ್ಯ ಉಪಾಧ್ಯಕ್ಷೆಣೀಯವರೆ, ಶಿಗ್ಗಾಂವ್ ಮತ್ತು ಸವಣೂರು ತಾಲೂಕುಗಳಲ್ಲಿ 1988–89ನೇ ಸಾಲಿನ ಅಣೇವಾರಿಯನ್ನು ಮತ್ತೆ ಮಾಡತಕ್ಕ ಬಗ್ಗೆ ಪರಿಶೀಲನೆ ಮಾಡತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಆದರೆ ನನ್ನ ಮತದಾರ ಕ್ಷೇತ್ರ ನಾಲ್ಕೈದು ವರ್ಷಗಳಿಂದ ಸತತವಾಗಿ ಬರಗಾಲಕ್ಕೆ ತುತ್ತಾಗಿದೆ. ಅಣೇವಾರಿ ಮಾಡತಕ್ಕ ಪದ್ಧತಿ ಬಹಳ ಕೆಟ್ಟ ಸಂಪ್ರದಾಯದ್ದು ಇದೆ. ರೈತರು ಬೆಳೆದಂತಹ ಬೆಳೆಗಳನ್ನು ಸರಿಯಾಗಿ ಅಣೇವಾರಿ ಮಾಡುತ್ತಿಲ್ಲ. ಈ ಪ್ರಶ್ನೆ ನೇರವಾಗಿ ಸಾಲ ಮನ್ನಾಕ್ಕೆ ಸಂಬಂಧಪಟ್ಟದ್ದು ಇದ್ದು, ನನ್ನ ಮತದಾರ ಕ್ಷೇತ್ರವೊಂದೇ ಅಲ್ಲ ಇಡೀ ರಾಜ್ಯದ ರೈತರಿಗೆ ಬಹಳ ತೊಂದರೆಯಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆ ಕಾರಣದಿಂದ ನಮ್ಮ ಸರ್ಕಾರದವರು ಈ ಅಣೇವಾರಿ ಮಾಡುವಾಗ ಅನುಸರಿಸತಕ್ಕ ಪದ್ಧತಿ ಏನು? ಅದರಲ್ಲಿ ರೈತರು ಒಳಗೊಂಡಿದ್ದಾರೆಯೇ ಹೇಗೆ? ಅದರ ಬಗ್ಗೆ ವಿವರಣೆ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಉಪಾಧ್ಯಕ್ಷೆಣೀಯವರೆ, ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಡೆಪ್ಯುಟಿ ತಹಶೀಲ್ದಾರ್‌ರವರು ಟೋಟಲ್ 5 ಪರ್ಸೆಂಟ್ ಹಳ್ಳಿಗಳಿಗೆ ಭೇಟಿ ಕೊಟ್ಟು ಕ್ರಾಪ್ ಕಟ್ಟಿಂಗ್ ಎಕ್ಸ್‌ಪೆರಿಮೆಂಟ್ ಮಾಡುತ್ತಾರೆ. ನಂತರ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಸ್ಯಾಂಪಲ್‌ಗೋಸ್ಕರ ಕೆಲವು ಪ್ಲಾಟ್‌ಗಳನ್ನು ಸ್ಯಾಂಪಲ್‌ಗೋಸ್ಕರ ತೆಗೆದುಕೊಂಡು ಅದರ ಮೇಲೆ ಆವರೇಜ್ ತೆಗೆದುಕೊಂಡು ಈ ಅಣೇವಾರಿ ಫಿಕ್ಸ್ ಮಾಡುತ್ತಾರೆ.

ಶ್ರೀ ಮಂಜುನಾಥ್ ಚನ್ನಪ್ಪ ಕುನ್ನೂರ :– ಈ ಪದ್ಧತಿಯನ್ನು ತೆಗೆದುಹಾಕಿ ಪುನಃ ಅಣೇವಾರಿ ಮಾಡಲಿಕ್ಕೆ ಪರಿಶೀಲನೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಕೆಲವೊಂದು ಕಾಗದ ಪತ್ರಗಳನ್ನು ಕೂಡ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ನಮ್ಮ ಮತದಾರ ಕ್ಷೇತ್ರದಲ್ಲಿ ಬರತಕ್ಕ ಎಲೂಗಿ ಗ್ರಾಮದಲ್ಲಿ ಸರ್ವೆ ನಂ. 5(ಅ) ಮತ್ತು 74(2)ಎ ಇಲ್ಲಿ ಹೈಬ್ರಿಡ್ ಜೋಳ ಪೀಕ್ ಪಹಣಿಯಲ್ಲಿ

ತೋರಿಸಿದರೆ ಜಿಲ್ಲಾಧಿಕಾರಿಗಳ ತೆಗೆದುಕೊಂಡು ರಿಪೋರ್ಟ್‌ನಲ್ಲಿ ಶೇಂಗಾ ಇದೆಯೆಂದು ಆಣೆವಾರಿ ಮಾಡಿದ್ದಾರೆ. ಎಳ್ಳು ಬೆಳೆ ಇರತಕ್ಕ ಭೂಮಿಯಲ್ಲಿ ಪಹಣಿ ಬರೆಯುವಾಗ ಹೈಬ್ರಿಡ್‌ಜೋಳ ಇದೆಯೆಂದು ಬರೆದಿದ್ದಾರೆ. ಈ ರೀತಿಯ ತಪ್ಪನ್ನು Prima facie, it goes to show that they have committed mistakes i.e., the revenue officers. ಆದ್ದರಿಂದ ಇದನ್ನು ಪುನಃ ಪರಿಶೀಲನೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಈ ಕಾಗದ ಪತ್ರಗಳನ್ನು ಸಹ ಅವರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಈಗಾಗಲೇ ಮಾನ್ಯ ಸದಸ್ಯರು ಕಾಗದ ಪತ್ರಗಳನ್ನು ಅದರ ನಕ್ಷೆ ಮಾಡಿಕೊಟ್ಟಿದ್ದಾರೆ. ನಾನು ಅದರ ಬಗ್ಗೆ ತನಿಖೆ ಮಾಡಲಿಕ್ಕೆ ಕಳುಹಿಸಿಕೊಟ್ಟಿದ್ದೇನೆ. ಈಗ ತೊಂದರೆ ಏನೆಂದರೆ, ಆಣೆವಾರಿ ಮಾಡಲಿಕ್ಕೆ ಈಗ ಬೆಳೆ ಇಡಬೇಕಾಗುತ್ತದೆ ಆಣೆವಾರಿ ಮಾಡಲಿಕ್ಕೆ. ಆದರೂ ಕೂಡ ಮಾನ್ಯ ಸದಸ್ಯರು ಕೊಟ್ಟ ಕಾಗದಪತ್ರಗಳನ್ನು ಜಿಲ್ಲಾಧಿಕಾರಿಗಳಿಗೆ ತನಿಖೆಗಾಗಿ ಕಳಿಸಿಕೊಟ್ಟಿದ್ದೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ :– ಈ ಪದ್ಧತಿ ಬ್ರಿಟೀಷ್‌ರ ಕಾಲದ್ದು. ಅದು ಈಗ ರೈತರು ಮಾಡತಕ್ಕಂಥ ಖರ್ಚಿಗೂ, ಈ ಹಳೆ ಪದ್ಧತಿಗೂ ಬಹಳ ತಾರತಮ್ಯ ಇದೆ. ಅವರಿಗೆ ಅನ್ಯಾಯವಾಗುತ್ತಿದೆ. ಸಾಲ ಮನ್ನಾ ವಿಚಾರದಲ್ಲಿ ಸಹಿತ ಲಕ್ಷಾಂತರ ರೈತರಿಗೆ ಅನ್ಯಾಯವಾಗಿದೆ. ಈ ಹಳೆಯ ಪದ್ಧತಿಯನ್ನು ತೆಗೆದುಹಾಕಿ ಒಂದು ಆಧುನಿಕ ರೀತಿಯಲ್ಲಿ ಹೊಸ ಆಣೆವಾರಿ ಪದ್ಧತಿಯನ್ನು ಜಾರಿಗೆ ತರಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಹೊಸ ವಿಧಾನವನ್ನು ಹೇಗೆ ತರಬೇಕು? ಮೊನ್ನೆ ಮಾತನಾಡುವಾಗಲೇ ಪ್ರೊ: ನಂಜುಂಡಸ್ವಾಮಿಯವರು ಮತ್ತು ತಾವು ಬರಗಾಲದ ಮೇಲೆ ಸ್ವಲ್ಪ ಬೆಳಕು ಚೆಲ್ಲುವ ಹಾಗೆ ಹೇಳಿದಿರಿ. ಯಾವ ಹೊಸ ಪದ್ಧತಿ, ಹೇಗೆ ಅಡಾಪ್ಟ್ ಮಾಡಬೇಕೆಂದು ಕೊನೆಯ ಪಕ್ಷ ತಾವು ಹೇಳಿದರೆ, ನಾನು ಸಂಬಂಧಪಟ್ಟ ನಮ್ಮ ರೆವಿನ್ಯೂ ಇಲಾಖೆಯ ಸಿಬ್ಬಂದಿಯನ್ನು ಕರೆದು, ಕಾರ್ಯದರ್ಶಿಯವರನ್ನು ಕರೆದು ಇದರ ಬಗ್ಗೆ ಮಾತನಾಡೋಣ. ಈಗ ಹೊಸ ನೀತಿಯನ್ನು ರೂಪಿಸುವಾಗ ಇದು ಎಲ್ಲ ಕಡೆಗೂ ಅನ್ವಯಿಸುವ ಹಾಗೆ ಮಾಡಬೇಕಾಗುತ್ತದೆ. ಹಾಗೆ ಮಾಡಬೇಕಾದರೆ ನಾವು ಒಬ್ಬರೇ ಅಲ್ಲ, ಆಕ್ಕಪಕ್ಕದ ರಾಜ್ಯಗಳಲ್ಲೂ ಕೂಡ ಅವರು ಯಾವ ರೀತಿ ಮಾಡುತ್ತಾರೆ ಎಂದು ತಿಳಿದು, ಏಕೆಂದರೆ ಇದನ್ನು ನಾವು ಅಡಾಪ್ಟ್ ಮಾಡಿದ ಮೇಲೆ ಬೇರೆಯವರು ಕೂಡ ನಮ್ಮನ್ನು ಒಪ್ಪಿಕೊಳ್ಳಬೇಕು. ಸಾಲ ಮನ್ನಾಕ್ಕಾಗಲೀ, ಬೇರೆ ಯಾವುದೇ ಕಾರ್ಯಕ್ರಮಕ್ಕಾಗಿ ಆಗಲೀ, ಆಕ್ಸೆಪ್ಟಿಬಿಲಿಟಿ ಕೂಡ ಬೇಕು. ಅದಕ್ಕೆ ತಾವು ಏನಾದರೂ ನಿರ್ದಿಷ್ಟವಾದ ಸಲಹೆಯನ್ನು ಕೊಟ್ಟರೆ, ಈ ಬೇಸಿನ್ ಮೇಲೆ ಮಾಡಬೇಕೆಂದರೆ ಸರ್ಕಾರ ಖಂಡಿತವಾಗಿಯೂ ಅದನ್ನು ಎಕ್ಸಾಮಿನ್ ಮಾಡುತ್ತದೆ.

ಶ್ರೀ ಎಂ. ನಾರಾಯಣಸ್ವಾಮಿ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ, ಅಂದರೆ ಈ ಸರ್ಕಾರದವರು ಯಾವ ರೀತಿ ಆಣೆವಾರಿ ಪದ್ಧತಿ ಮಾಡುತ್ತಿದ್ದಾರೆ ಎಂದು ಮಾನ್ಯ ಸಚಿವರು ಹೇಳಿದರು. ಡಿ.ಸಿ. ಮೂಲಕ ತಹಸೀಲ್ದಾರರಿಗೆ ಕಳಿಸಿಕೊಟ್ಟು ಅಥವಾ ತಹಸೀಲ್ದಾರರಿಗೆ ಕಳಿಸಿಕೊಟ್ಟು ನಂತರ ರೆವಿನ್ಯೂ ಇನ್‌ಸ್ಪೆಕ್ಟರ್, ವಿಲೇಜ್ ಅಕೌಂಟೆಂಟ್ ಕೂತು ಆಣೇವಾರಿ ಮಾಡುತ್ತಾರೆ ಅಂತ ಹೇಳಿದರು. ಆದರೆ ಪ್ರಸ್ತುತ ಸ್ಥಿತಿಯಲ್ಲಿ ಸುಳ್ಳು ಮಾಹಿತಿಯನ್ನು ಕಲೆ ಹಾಕತಕ್ಕಂಥ ಪದ್ಧತಿ ಇದೆ. ಅವರು ಏನು ಮಾಡುತ್ತಾರೆ ಎಂದರೆ ಸರ್ಕಾರದ ಸುತ್ತೋಲೆ ಹೋದ ತಕ್ಷಣ ಸಂಬಂಧಪಟ್ಟ ತಹಸೀಲ್ದಾರರು, ರೆವಿನ್ಯೂ ಇನ್‌ಸ್ಪೆಕ್ಟರ್‌ರವರು ಮತ್ತು ವಿಲೇಜ್ ಅಕೌಂಟೆಂಟ್‌ಗಳು ಸೇರಿಕೊಂಡು ಎಷ್ಟು ಆಣೇವಾರಿ ಹಾಕಬೇಕು, ಎಷ್ಟು ಪರ್ಸೆಂಟ್ ಎಂದು ಹಾಕಿಬಿಡುತ್ತಾರೆ. ಬರೇ ಆಫೀಸಿನಲ್ಲಿ ಕುಳಿತು ಮಾಡುತ್ತಾರೆಯೇ ವಿನಹ ಕನಿಷ್ಠ ಪಕ್ಷ ಸ್ಥಳಗಳಿಗೆ ಭೇಟ್ಟಿ ಕೊಡುವ ಸೌಜನ್ಯ ಕೂಡ ಅವರಿಗೆ ಇರುವುದಿಲ್ಲ. ಇದರ ಬಗ್ಗೆ ಮಾನ್ಯ ಎಚ್.ಆರ್. ರಾಜು ಅವರು ಇದ್ದಾಗ ನಾನು ಮತ್ತು ಶ್ರೀ ಬೈರೇಗೌಡರು ಜಿಲ್ಲಾ ಪರಿಷತ್ತಿನಲ್ಲಿ ಪ್ರತಿಭಟಿಸಿದ್ದೇವೆ. ಆದ್ದರಿಂದ ಈ ವ್ಯವಸ್ಥೆಯನ್ನು ಸರಿಪಡಿಸಬೇಕಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ :– ಮಾನ್ಯ ಸಚಿವರು ಆಣೇವಾರಿ ಪದ್ಧತಿಯನ್ನು ಬದಲಾವಣೆ ಮಾಡುವ ಬಗ್ಗೆ ಸಲಹೆಗಳನ್ನು ಕೇಳಿದ್ದಾರೆ. ಈಗ ಇರತಕ್ಕಂಥ ಆಣೇವಾರಿ ಪದ್ಧತಿಯಲ್ಲಿ ಕೆಲವೊಂದು ಬೆಳೆಗಳನ್ನು ಮಾತ್ರ

ಪರಿಗಣಿಸಿ ಆಣೇವಾರು ಮಾಡುವಂಥ ವ್ಯವಸ್ಥೆ ಇದೆ. ಆದರೆ ಈಗ ಬದಲಾದ ಕಾಲದಲ್ಲಿ ಹೊಸದಾಗಿ ಎಲ್ಲ ಬೆಳೆಗಳ ಬಗ್ಗೆ ಆಣೇವಾರಿ ತೆಗೆದುಕೊಳ್ಳುವ ಪದ್ಧತಿ ಇಲ್ಲ. ಎಲ್ಲ ಬೆಳೆಗಳ ಬಗ್ಗೆ ಇಳುವರಿ ಎಷ್ಟು ಬರುತ್ತದೆ ಎಂದು ತೆಗೆದುಕೊಳ್ಳಬೇಕು. ವಕ್ಕಲುತನ ಇಲಾಖೆಯವರು ಯಾವ್ಯಾಯವ ಬೆಳೆ ಎಷ್ಟು ಪ್ರಮಾಣದಲ್ಲಿ ಬರುತ್ತದೆ ಎಂದು ಸರ್ಕಾರ ನಿಗದಿಪಡಿಸಿದ ಗುರಿ ಏನಿದೆ, ಈ ಇಳುವರಿಗೆ ಅನುಗುಣವಾಗಿ ತೆಗೆದುಕೊಳ್ಳಬೇಕೇ ವಿನಃ ಬ್ರಿಟಿಷ್ ಪದ್ಧತಿಯಿಂದ ರೈತರಿಗೆ ಅನ್ಯಾಯವಾಗುತ್ತದೆ. ಅದಕ್ಕಾಗಿ ನಾನು ಸಲಹೆ ಕೊಡುವುದೇನೆಂದರೆ, ಈ ಬಗ್ಗೆ ಆಣೇವಾರಿ ಪದ್ಧತಿಯನ್ನು ಬದಲಾವಣೆ ಮಾಡಲಿಕ್ಕೆ ಹೊಸ ವಿಧಾನಗಳನ್ನು ಕಂಡುಹಿಡಿಯುವುದಕ್ಕೆ ಒಂದು ಸದನದ ಸಮಿತಿಯನ್ನು ಮಾಡಿದರೆ ಒಳ್ಳೆಯದು. ಏಕೆಂದರೆ ಇದು ಬಹಳ ಮಹತ್ವದ ವಿಷಯ. ಈಗ ರೈತರಿಗೆ ಈಗಾಗಲೇ ಸಾಲ ಮನ್ನಾ ವಿಚಾರದಲ್ಲಿ ಮತ್ತು ಬರಗಾಲ ವಿಚಾರದಲ್ಲಿ ಕೋಟ್ಯಾಂತರ ರೂಪಾಯಿ ಹಣ ನಷ್ಟವಾಗಿದೆ. ರೈತರಿಗೆ ತುಂಬಲಾರದ ಅನ್ಯಾಯವಾಗಿದೆ. ಆದ್ದರಿಂದ ಇದನ್ನು ಸಮಗ್ರವಾಗಿ ವಿಚಾರ ಮಾಡುವ ಅವಶ್ಯಕತೆ ಇದೆ. ಆದ್ದರಿಂದ ಒಂದು ಸದನದ ಸಮಿತಿಯನ್ನು ನೇಮಿಸಿ ಈ ಬಗ್ಗೆ ಪರಿಪೂರ್ಣವಾಗಿ ಈಗಿನ ಕಾನೂನಿಗೆ ಬದಲಾವಣೆ ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್ :– ಇಲ್ಲಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಮಾಡಿದ್ದನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಒಪ್ಪುವುದಿಲ್ಲ. ಡಿ.ಸಿ. ಅಥವಾ ತಹಸೀಲ್ದಾರರು ಕೇಳುವುದಿಲ್ಲ. ವಿಲೇಜ್ ಆಕೌಂಟೆಂಟ್ ಬರೆದದ್ದನ್ನು ಕೂಡ ಅವರು ಒಪ್ಪುವುದಿಲ್ಲ. ನಿಜವಾದ ಪೀಕ್ ಏನಿದೆ, ಅದನ್ನು ಬರೆಯತಕ್ಕದ್ದನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ರೈತರು ಬೆಳೆದ ಬೆಳೆಯ ಪೈಕಿ ಒಟ್ಟು ಬೆಳೆಯಲ್ಲಿ ಶೇಕಡಾ 5ರಷ್ಟು ತಹಸೀಲ್ದಾರರು, ಶೇಕಡಾ 20ರಷ್ಟು ರೆವಿನ್ಯೂ ಇನ್‌ಸ್ಪೆಕ್ಟರ್ ಅವರು ಟಿಸ್ಟ್ ಮಾಡಬೇಕೆಂದು ಹೇಳಿದ್ದಾರೆ. ಹಾಗಾದರೆ 1988–89ರಲ್ಲಿ ಸಿಗ್ಗಾವಿ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಯಾವ್ಯಾವ ಗ್ರಾಮಗಳಲ್ಲಿ ಶೇಕಡಾ 5ರಷ್ಟು ತಹಸೀಲ್ದಾರರು ಟಿಸ್ಟ್ ಮಾಡಿದ್ದಾರೆ? ಮತ್ತು ಶೇಕಡಾ 20ರಷ್ಟು ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು ಟಿಸ್ಟ್ ಮಾಡಿದ್ದಾರೆ ಎನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನನ್ನ ಹತ್ತಿರ ಲಿಸ್ಟ್ ಇದೆ, ಬೇಕಾದರೆ ತಮಗೆ ಕೊಡುತ್ತೇನೆ. 1988–89ರಲ್ಲಿ 43 ಹಳ್ಳಿಗಳಲ್ಲಿ ಇನ್‌ಸ್ಪೆಕ್ಷನ್ ಮಾಡಲಾಗಿದೆ, 11 ಹಳ್ಳಿಗಳನ್ನು ವಿಸಿಟ್ ಮಾಡಲಾಗಿದೆ. ಬೇಕಾದರೆ ತಮಗೆ ಎಲ್ಲಾ ಮಾಹಿತಿ ಕೊಡುತ್ತೇನೆ. ಮತ್ತೆ ಒಂದೆರಡು ಸಲಹೆಗಳನ್ನು ಕೊಟ್ಟಿದ್ದಾರೆ, ಇವುಗಳ ಬಗ್ಗೆ ಸಮಗ್ರವಾಗಿ ಯೋಚನೆ ಮಾಡತಕ್ಕದ್ದು ಅವಶ್ಯಕತೆ ಇದೆ. ಏಕೆಂದರೆ, ಇದೇನು ಹೊಸದಾಗಿ ನಾನು ಸೃಷ್ಟಿ ಮಾಡಿಲ್ಲ, ಎಲ್ಲಾ ಸರ್ಕಾರದವರೂ ಇದನ್ನೇ ಫಾಲೋ ಮಾಡಿಕೊಂಡು ಬಂದಿದ್ದಾರೆ. ಇವತ್ತೂ ಅದೇ ಪದ್ಧತಿ ಇದೆ. Even if you come, you have to follows the same procedure. ನಾನು ಅದಕ್ಕೇ ಹೇಳಿದೆ. ನಾವು ಮಾಡಿದ್ದನ್ನು ಬ್ಯಾಂಕ್‌ನವರು, ರಿಸರ್ವ್ ಬ್ಯಾಂಕಿನವರು ಎಲ್ಲರೂ ಒಪ್ಪಬೇಕು. ತಾವು ಸೂಸ ಬದಲಾವಣೆ ಮಾಡಬೇಕೆಂದು ಒಂದೆರಡು ಪಾಯಿಂಟ್ ತಾವು ಹೇಳಿದ್ದೀರಿ. ಇದರ ಬಗ್ಗೆ ಖಂಡಿತವಾಗಿಯೂ ಅಧಿಕಾರಿಗಳನ್ನು ಕರೆಸಿ, ಯಾರಿಗೆ ಇದರಲ್ಲಿ ಆಸಕ್ತಿ ಇದೆ ಅನುಭವ ಇದೆ, ಅಂತಹವರನ್ನು ಕರೆಸಿ, ಚರ್ಚಿಸುವ ಮೂಲಕ ಇದನ್ನು ಪರಿಶೀಲಿಸುತ್ತೇನೆ.

ನಾಡ ಕಚೇರಿಗಳ ಕೆಲಸಗಳ ಬಗ್ಗೆ

632. ಶ್ರೀ ಬಿ.ಎಸ್. ಚವಾಣ್ (ಶಹಬಾದ್) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಹೋಬಳಿ ಮಟ್ಟದಲ್ಲಿರುವ ನಾಡ ಕಚೇರಿಗಳ ಕೆಲಸಗಳೇನು;